Regd No BG 165 10-11-1969

SATYAVADI Daily, MYSORE 4 ★ 53 rd Year of Publication

శ్రీ సత్యనారాయణ
బెనిఫిట్ స్కీం
(చాముండేశ్వరి టాకీస్ కట్టడ)
203, సయ్యాజిరావ్ రస్తే,
మైసూరు-1
మేల్కండ యోజనೆಗೆ
ఇందే చందాదారరాగిరి
అదర ఫలవన్ను పడెయిరి

సత్యವಾದಿ

Golden Jubilee Celebrated Paper

స್ಥಾపకರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಪಾರ್ಲಿಮೆಂಟ್ ವಿಸರ್ಜನೆ ಇಲ್ಲವೆಂದು ಪ್ರಧಾನಿ

ಚಂಡ ವಾತರುತದ ಹಾವಳಿ

ಶುಕ್ರವಾರ ಆಂಧ್ರ ತೀರ ಪ್ರದೇಶಗಳ ಮೇಲೆ ಬೀಸಿದ ಚಂಡವಾತರುತದಿಂದ ಇಪ್ಪತ್ತೂರು ಮಂದಿ ಸತ್ತಿರುವರೆಂದು ಹೈದರಾಬಾದಿನಿಂದ ಬಂದ ವರದಿ ತಿಳಿಸಿತ್ತದೆ. ಪೂರ್ವ ಗೋದಾವರಿ ಜಿಲ್ಲೆಯಲ್ಲಿ 30 ಜನರಿಗೆ ಗಾಯವಾಗಿದೆ ಕಾಕಿನಾಡದಲ್ಲಿ 2 ಸಾವಿರ ಕೋಳಿ ಫಾರಂಗಳು ನಾಶವಾಗಿದೆ ಆಂಧ್ರದ ಇಬ್ಬರು ಮಂತ್ರಿಗಳಾದ ಶ್ರೀಗಳಾದ ರಾಮಲಿಂಗರಾಜು ಹಾಗೂ ಸಿದ್ದಾರೆಡ್ಡಿ ಹಾನಿಗೊಳಗಾದ ಪ್ರದೇಶಗಳಲ್ಲಿ ಪ್ರವಾಸ ಮಾಡುತ್ತಿರುವರು.

★

ಪಾಕ್‌ನಿಂದ ತನಿಖೆ

ಸೌರಾಷ್ಟ್ರ ತೀರದ ಓಕಾವಲ್ಲಿ ಪಾಕೀಸ್ತಾನದ 8 ಹಡಗುಗಳು ಮತ್ತು ಅದರಲ್ಲಿ ಇದ್ದ 142 ಪಾಕೀಸ್ತಾನದ ರಾಷ್ಟ್ರೀಯರನ್ನು ಸುಂಕದ ಇಲಾಖೆಯವರು ವಶಪಡಿಸಿಕೊಂಡರು. ಭಾರತದ ನೌಕಾ ರಕ್ಷಣೆ ತನಿಖೆ ಮಾಡುವುದೇ ಉದ್ದೇಶ ಎನ್ನಲಾಗಿದೆ.

★

ಮತ್ತೆ ಆಯುಧ ಮಾರಾಟ

ಭಾರತ ಮತ್ತು ಪಾಕೀಸ್ತಾನಕ್ಕೆ ಆಯುಧ ಮಾರಾಟ ನಿಷೇಧಿಸಿರುವದನ್ನು ಮರುಪರಿಶೀಲಿಸಿ ಮಾರಾಟ ಆರಂಭಿಸಬೇಕೆಂದು ಅಮೇರಿಕಾದ ವಿದೇಶ ಸಮಿತಿ ಆಡಳಿತಕ್ಕೆ ತಿಳಿಸಿದೆ.

●

ಸಾಮೂಹಿಕ ಮುಷ್ಕರ

ಮೈಸೂರು ಆರನುನೆ ಕಛೇರಿ ಮುಂದೆ ಈ ತಿಂಗಳು 14 ರಂದು ಆರನುನೆ ನೌಕರರು ಸಾಮೂಹಿಕ ಸತ್ಯಾಗ್ರಹ ನಡೆಸುವರೆಂದು ವರದಿಯಾಗಿದೆ.

○ 4 ನೇ ಯೋಜನೆಯಲ್ಲಿ ವಿಪರೀತ ಬದಲಾವಣೆ ಇಲ್ಲವೆಂದು ನವ ದೆಹಲಿಯಿಂದ ಬಂದ ವಾರ್ತೆ ತಿಳಿಸುತ್ತದೆ.

ಪಾಟೀಲರ ಸಲಹೆ

ಕಾಂಗ್ರೆಸ್ ಬಿಕ್ಕಟ್ಟು ಎದುರಿಸಲು ರಾಜ್ಯಗಳ ಮುಖ್ಯ ಮಂತ್ರಿಗಳು ಸಮ್ಮಿಳಿತರಾಗಿ ದೇಶದ ಹಿತವನ್ನು ತಮ್ಮ ಮನದಲ್ಲಿಟ್ಟುಕೊಂಡು ಸೂತ್ರವನ್ನು ನಿರ್ಧರಿಸಿ ಆದರಂತೆ ಎರಡು ಪಕ್ಷಗಳ ನಾಯಕರೂ ನಡೆಯುವಂತೆ ತಿಳಿಸಬೇಕೆಂದು ಮುಖ್ಯ ಶ್ರೀ ವೀರೇಂದ್ರ ಪಾಟೀಲರು ಬೆಂಗಳೂರಿನಲ್ಲಿ ತಿಳಿಸಿದರು.

★

ನೇತ್ರ ಶಿಬಿರ

ಈ ತಿಂಗಳು 12 ನೇ ತಾರೀಖು ಶುಕ್ರವಾರದಿನ ಸಿರಾದಲ್ಲಿ ನೇತ್ರದಾನಿ ಡಾ|| ಎಂ ಸಿ ಮೋದಿಯವರು ಉಚಿತ ನೇತ್ರಶಿಬಿರ ಆರಂಭಿಸುವರು.

★

ಕನ್ನಡಕ್ಕೆ ತಿರಸ್ಕಾರ

ಪಕ್ಕದ ರಾಜ್ಯಗಳಲ್ಲಿ ಕನ್ನಡ ತಿರಸ್ಕರಿಸಲ್ಪಟ್ಟಿದೆ, ನಮ್ಮ ರಾಜ್ಯದಲ್ಲಿ ಆ ಭಾಷೆಗಳಿಗೆ ಪ್ರೋತ್ಸಾಹ ಇದೆ ಎಂದು ಉಪಸ್ಥಾನಪತಿ ಶ್ರೀ ದೇ. ಜವರೇಗೌಡರು ನಂಜನಗೂಡಿನಲ್ಲಿ ತಿಳಿಸಿದರು.

○

ಅಪಾಯವಿ

ಕಾಂಗ್ರೆಸಿನ ಈಗಿನ ಬಿಕ್ಕಟ್ಟಿನಿಂದ ದೇಶಕ್ಕೆ ಅಪಾಯ ಇಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಿನ್ನೆ ನವ ದೆಹಲಿಯಲ್ಲಿ ತಿಳಿಸಿದರು.

★

ಬದಲಾವಣೆ

ಭಾರತ ಮತ್ತು ಚೀನಾ ಬಾಂಧವ್ಯದಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನವ ದೆಹಲಿಯಲ್ಲಿ ನಿನ್ನೆ ತಿಳಿಸಿದರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು
ಮೈಸೂರು ರಾಜ್ಯದ ಲಾಟರಿ
2,50,000 ರೂ. ಗಳ 4 ಮೊದಲನೆ ಬಹುಮಾನಗಳು
1,00,000 ರೂ. ಗಳ 4 ಎರಡನೆ ಬಹುಮಾನಗಳು
ಇವುಗಳಲ್ಲದೆ ಜೊತೆಗೆ 4,268 ಇತರ 100 ರೂ. ಇಂದ 50,000 ರೂ. ವರೆಗಿನ ನಗದು ಬಹುಮಾನಗಳು
ಒಂದು ಟಿಕೆಟ್ಟಿನ ಬೆಲೆ 1-00 ರೂ. ಮಾತ್ರ
ಲಾಟರಿ " ಡ್ರಾ " ಮಾಡುವ ತಾರೀಖು, 25 ನೇ ಜನವರಿ 1970, ಭಾನುವಾರ
ಅಧಿಕೃತ ಮಾರಾಟಗಾರರು :
ಬಾಹುಸಾರ್ ಕಂಪೆನಿ, ಓಲ್ಡ್‌ಬ್ಯಾಂಕ್ ರೋಡ್, ಮೈಸೂರು

ಪ್ರಧಾನಿ ನಪ್ಪನೆ ಏಟ

ಸಂಸ್ಥೆಯಲ್ಲಿ ಈಗ ಇರುವ ಬಿಕ್ಕಟ್ಟಿನ ದೆಸೆಯಿಂದ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ವಿಶ್ವಾಸ ಮತ ಕೇಳಬೇಕೆಂಬ ಪ್ರಶ್ನೆಯನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಿನ್ನೆ ಸ್ಪಷ್ಟವಾಗಿ ನಿರಾಕರಿಸಿದರು. ಪಾರ್ಲಿಮೆಂಟ್ ವಿಸರ್ಜನೆ ಆಗುವುದಿಲ್ಲವೆಂದು ಅವರು ಸ್ಪಷ್ಟವಾಗಿ ತಿಳಿಸಿದರು.

*

○ ಶ್ರೀ ಸಿ. ಸುಬ್ರಹ್ಮಣ್ಯಂರಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವವನ್ನು ಮತ್ತೆ ಕೊಡುವುದು ಕಾನೂನಿಗೆ ವಿರೋಧವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ನಿನ್ನೆ ನವ ದೆಹಲಿಯಲ್ಲಿ ತಿಳಿಸಿದರು.

★ ಈ ತಿಂಗಳು 14 ನೇ ತಾ|| ಸ್ಥಳದಲ್ಲಿ ಪೈಟಿಂಗ್ ಸ್ಪರ್ಧೆಯನ್ನು ಮೈಸೂರು ಪುರಸಭೆ ಏರ್ಪಡಿಸಿದೆ.

○ ಪ್ರಧಾನಿಯವರ ಪ್ರಗತಿಶೀಲ ನೀತಿಗಳಿಗೆ ಬೆಂಬಲಿಸಿ ಮೈಸೂರು ನಗರದ ವಿದ್ಯಾರ್ಥಿಗಳು ಮತ್ತು ಯುವಕರು ಸಹಿ ಸಂಗ್ರಹಿಸುತ್ತಿದ್ದಾರೆ.

● ಮೊನ್ನೆ ಮಧ್ಯರಾತ್ರಿ ಮಹಾರಾಷ್ಟ್ರ ರಾಜ್ಯಪಾಲ ಶ್ರೀ ಪಿ. ವಿ. ಚೆರಿಯನ್‌ರು ತಮ್ಮ 76 ನೇ ವಯಸ್ಸಿನಲ್ಲಿ ಹೃದಯ ವೇದನೆಯಿಂದ ಬೊಂಬಾಯಿನಲ್ಲಿ ನಿಧನ ರಾದರು.

ಚಹಾಪಾನ ಮಾಡಲಿಲ್ಲ

ಗುರುದೇವ ರವೀಂದ್ರನಾಥ ಟಾಗೂರರು ತಮ್ಮ ಜೀವಮಾನದಲ್ಲಿ ಎಂದೂ ಚಹಾಪಾನ ಮಾಡಿಲ್ಲ ಎಂದು ಪ್ರಕಟವಾಗಿದೆ.

ಪ್ರಧಾನಿ ಶುಭಾಶಯಗಳು

ನವ ದೆಹಲಿಯ ವಿಜ್ಞಾನ ಭವನದಲ್ಲಿ ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ 300 ಭಾರತೀಯ ಹಾಗೂ ವಿದೇಶಿ ಪತ್ರಿಕೆಗಳವರಿಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಶುಭಾಶಯ ಕೋರಿದರು

★

ಮಹಾಬೋಧಿ ಮೈತ್ರಿ ಮಂಡಲಿ ಮೈಸೂರಿನ ಪಿ ಕೆ ಸ್ಯಾನಿಟೋರಿಯಂನ 250 ರೋಗಿಗಳಿಗೆ ಆಹಾರ ಪೊಟ್ಟಣವನ್ನು ದೀಪಾವಳಿ ಪ್ರಯುಕ್ತ ಹಂಚಿತು.

ಲಂಡನ್ನಿನ ಬೀದಿಗಳಲ್ಲಿ ಕಸದ ರಾಶಿ

ಲಂಡನ್ ನೋಟ್ ಬುಕ್ ಶಿರೋನಾಮೆಯಲ್ಲಿ ಜೇಂಬ್ ಕೈಲಿ ಹೀಗೆ ಬರೆದಿರುವರು – ಸಾದ್ಯಾಜಿಕ ಪದ್ಧತಿಯಲ್ಲಿ ಹೀನಜನರ ಹೀನಸ್ಥಿತಿಗೆ ಕಾರಣವು ಏನೇ ಆಗಿದ್ದರೂ, ಅವರು ಈಗ ತಮ್ಮ ಗುಲಾಮಗಿರಿಯನ್ನು ತೊಡೆದುಹಾಕಲು ಕೈಹಾಕಿರುವರು. ಲಂಡನ್ನಿನ 32 ವಿಭಾಗಗಳಲ್ಲಿನ 20 ರಲ್ಲಿ ಒಂದು ವಾರಕ್ಕಿಂತಲೂ ಮೇಲ್ಪಟ್ಟು ಕಸ ತೆಗೆಯದೆ ಬಿದ್ದಿದೆ. ಹ್ಯಾಕ್ನೆಯಿಂದ ಬೆಲ್ಸ್ ವರೆಗೆ ರಸ್ತೆಯಲ್ಲೆಲ್ಲ ರಾಶಿಗಟ್ಟಲೆ ಕಸ. ಇದು ಬೆಲ್ಸ್‌ದ ನೆರೆಹೊರೆಗೆ, ಕೆನ್ಸಿಂಗ್‌ಟನ್ನಿನ ರಾಯಲ್ ಬು ರೋಗೆ ಹರಡದಿದ್ದರೂ, ಬಕ್ಕಿಂಗ್ಹಾಂ ಅರಮನೆ ಈ ಹೊಡೆತದ ಕಣ್ಣಿನೊಳಗಿದೆ. ಕಳೆದ ಮಂಗಳವಾರದಿಂದ ಅರಮನೆಯಿಂದ ಕಚಡ ತೆಗೆಯಲ್ಪಟ್ಟಿಲ್ಲ. ಕರಿಯವರ ಲಾರಿಗಳು ಕಚಡಾ ತೆಗೆಯುವವಿರುದ್ದ ಗುಡಿಸುವವರ ಪಿಕೆಟ್ ವ್ಯವಸ್ಥೆಯ ಚಿತ್ರ ಶುಕ್ರವಾರದ ಈವಿನಿಂಗ್ ಸ್ಟ್ಯಾಂಡರ್ಡ್ ಪತ್ರಿಕೆಯಲ್ಲಿ ಪ್ರಕಟವಿದೆ.

ನಾವು ರಸ್ತೆಗಳಲ್ಲಿ ಕಸಬಿದ್ದುಕೊಳೆಯುತ್ತಿರುವುದನ್ನು ಕಂಡು ನಾಚಿಕೆಗೊಳ್ಳುತ್ತಿದ್ದೇವೆ. ಈಗ ಹೀಗಾಗುತ್ತಿರುವುದು ಲಂಡನ್ನಿನ ಸರದಿಯೆಂದು ಕಾಣುತ್ತದೆ.

ಗಾಂಧಿಯವರ ಕುರಿತು ನಾಟಕ

ಯುನೆಸ್ಕೋ ನಿರೂಪಿಸಿದಂತೆ ಗಾಂಧಿ ಶತಮಾನೋತ್ಸವ ವಿಶ್ವದಾದ್ಯಂತ ನೆರವೇರುತ್ತಿದೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಮತ್ತು ಚಟುವಟಿಕೆ ಬಗ್ಗೆ ನಾಟಕವನ್ನು ಬರೆಯುವ ಅಂಶ ರಾಷ್ಟ್ರೀಯ ಸ್ಪರ್ಧೆಯನ್ನು ಅಮೇರಿಕಾದ ದಕ್ಷಿಣ ಇಲಿನಾಯಸ್ ವಿಶ್ವವಿದ್ಯಾನಿಲಯ ಏರ್ಪಡಿಸಿತು. ಅನೇಕ ನೂರು ನಾಟಕಗಳು ಬಂದವು. ಆವುಗಳಲ್ಲಿ ಸ್ಪರ್ಧೆ ನ್ಯಾಯಮೂರ್ತಿಗಳು ಮೂರನ್ನು ಒಪ್ಪಿಕೊಂಡರು.

ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ ಎಂ. ಎಸ್. ತಿಮ್ಮಯ್ಯನವರು ಪೌರರು ಹಾಗೂ ದೇಶೀಯರಿಗೆ ದೀಪಾವಳಿ ಶುಭಾಶಯ ಕೋರಿರುತ್ತಾರೆ.

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-0)
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

SHAKTI
SUDHA
A Superb Tonic

ವುಡ್‌ಲಾಂಡ್ ಜಯಪ್ರದ 5ನೇ ವಾರ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನೀವಾಕರ್
ಸಂಗೀತ : ಕಲ್ಯಾಣ್‌ಜಿ ಆನಂದಜಿ
[ದಿನ 8 ಪ್ರದರ್ಶನಗಳು]

ಆಪೆರಾ— ಅಮೋಘ 3 ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....
ತುಣ್ಡೈವನ್
ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್
ನಿರ್ದೇಶನ : ಎಂ ಎಂ ತಿರುಮಂಗಂ
ದಿನ 3 ಆಟಗಳು

Help The Gorakshana

ಗೋರಕ್ಷಣೆಯ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore